# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ:15ನೇ ಜನವರಿ 2021**

**ಸಂಖ್ಯೆ: 06**

ದಿನಾಂಕ:26.11.2019 ಹೊರಡಿಸಲಾಗಿದ್ದ ಲಘು ಪ್ರಕಟಣೆ ಸಂಖ್ಯೆ 38ನ್ನು ಮುಂದುವರೆಸುತ್ತಾ ಮಾನ್ಯ ಶಾಸಕರುಗಳ ಗಮನಕ್ಕೆ ತರಬಯಸುವುದೇನೆಂದರೆ 2021ನೇ ಫೆಬ್ರುವರಿ 15 ರಿಂದ ಫಾಸ್ಟ್ಯಾಗ್ (FASTAG) ಕಡ್ಡಾಯಗೊಳಿಸಲಾಗಿರುವ ಹಿನ್ನಲೆಯಲ್ಲಿ ಫಾಸ್ಟ್ಯಾಗ್ ಪಡೆಯಲು ಅರ್ಜಿಯನ್ನು ಸಲ್ಲಿಸದ, ಮಾನ್ಯ ಶಾಸಕರುಗಳು ಇದರೊಂದಿಗೆ ಲಗತ್ತಿಸಿರುವ ಅರ್ಜಿಯ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಅವಶ್ಯವಿರುವ ಈ ಕೆಳಕಂಡ ದಾಖಲಾತಿಗಳನ್ನು **ಶ್ರೀ ಬಿ.ಎ. ಬಸವರಾಜು, ಅಧೀನ ಕಾರ್ಯದರ್ಶಿ, ಕೊಠಡಿ ಸಂಖ್ಯೆ:162 "ಸಿ" ಮೊದಲನೆ ಮಹಡಿ, ವಿಧಾನಸೌಧ ಅಥವಾ ಶಾಖಾಧಿಕಾರಿ, ಶಾಸನ ರಚನಾ ಶಾಖೆ, ಕೊಠಡಿ ಸಂಖ್ಯೆ: 105, ವಿಧಾನಸೌಧ** ಇವರಿಗೆ ಜರೂರಾಗಿ ಒದಗಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ದಾಖಲಾತಿಗಳು:**

01. ಆರ್.ಸಿ. ಪುಸ್ತಕದ ಪ್ರತಿ
02. ಆಧಾರ್ ಕಾರ್ಡ್ ಪ್ರತಿ
03. ವಿಧಾನ ಪರಿಷತ್ತಿನ ಸಚಿವಾಲಯದ ವತಿಯಿಂದ ವಿತರಿಸಿರುವ ಗುರುತಿನ ಚೀಟಿಯ ಪ್ರತಿ
04. ಫಾಸ್‌ಪೋರ್ಟ್ ಅಳತೆಯ ಭಾವಚಿತ್ರ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.**

**www.kla.kar.nic.in/council/council.htm**